ನೌಕರರ ಈ ನ್ಯಾಯಯುತವಾದ ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್ ಮತ್ತು ನೌಕರರನ್ನು ಕರೆದು ಒಂದು ತೀರ್ಮಾನವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ನಿಯಮ ೩೩೪ರ ಮೇರೆಗೆ

ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳ ಭರ್ತಿ

೫.೪೦ ಪಿ. ಎಂ.

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):- ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಖಾಲಿ ಹುದ್ದೆಗಳು ಎಷ್ಟಿವೆ? ಈಗಾಗಲೇ ಸರಕಾರದ ಎಲ್ಲ ಖಾಲಿ ಹುದ್ದೆಗಳನ್ನು ಇನ್ನು ಎರಡು ವಾರದಲ್ಲಿ ಭರ್ತಿ ಮಾಡುತ್ತೇವೆಂದು ಹೇಳಿ ಎರಡು ತಿಂಗಳಾದರೂ ಇನ್ನೂ ಭರ್ತಿ ಮಾಡಿಲ್ಲ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದವರಿಗೆ ೧೫ ಪರ್ಸೆಂಟ್ ಸೇರಿಸುತ್ತೇವೆಂದು ಸರ್ಕಾರ ತೀರ್ಮಾನ ತೆಗೆದುಕೊಂಡರೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದರ ಬಗ್ಗೆ ಸಾರ್ವಜನಿಕರ ಹಿತದೃಷ್ಟಿಯಿಂದ ತಿಳಿಯಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ದಿನಾಂಕ ೩೧-೫-೯೧ರ ವೇಳೆಗೆ ೨೪೧ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಹೊಲಿ ನೇಮಕಾತಿ ನಿಯಮಗಳ ಪ್ರಕಾರ ಗ್ರಾಮೀಣ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲು ಅವಕಾಶವಿಲ್ಲ. ಸರ್ಕಾರವು ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ೧೫ ಒತ್ತಾಸೆ ಅಂಕಗಳನ್ನು ನೀಡಬೇಕೆಂದು ತೀರ್ಮಾನ ಕೈಗೊಂಡಿದೆ.

ಈ ನಿರ್ಧಾರವನ್ನು ಅನುಸರಿಸಿ ಜಾಲ್ತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಾಧ್ಯಕ್ಷೆಯವರು:- ಕೆ. ಹೆಚ್. ಹನುಮೇಗೌಡರ ವಿಷಯಕ್ಕೆ ೧೭ನೇ ತಾರೀಖು ಉತ್ತರ ಕೊಡಲಾಗಿದೆ. ಆದ್ದರಿಂದ ಇವತ್ತು ತೆಗೆಯುವುದಿಲ್ಲ.

ಮೂಡಬಿದ್ರೆಯ ಇರವೈಲಿಗೆ ಆರೋಗ್ಯ ಕೇಂದ್ರವನ್ನು ಒದಗಿಸುವ ಬಗ್ಗೆ

ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ನನ್ನ ಕ್ಷೇತ್ರವಾದ ಮೂಡಬಿದಿರೆಯ ಇರವೈಲು ಎಂಬಲ್ಲಿಗೆ ಆರೋಗ್ಯ ಕೇಂದ್ರ ಒದಗಿಸುವಂತೆ ಜಿಲ್ಲಾ ಪರಿಷತ್ ಮಂಜೂರು ಮಾಡಿ ಸರ್ಕಾರದವರ ಅನುಮೋದನೆಗೆ ಕಳುಹಿಸಿದ್ದು ಇರವೈಲಿಗೆ ಮಂಜೂರಾತಿ ಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾಪರಿಷತ್ ಇರವೈಲಿಗೆ ಆರೋಗ್ಯ ಕೇಂದ್ರ ಕೊಡಬೇಕಂದು ಪುನರಪಿ ಮಂಜೂರು ಮಾಡಿ ಅನುಮೋದನೆ ಕೊಡಬೇಕೆಂದು ಸರ್ಕಾರಕ್ಕೆ ಕಳಿಹಿಸಿಕೊಟ್ಟಿದೆ. ಹೀಗಾಗಿ ಬಡವರೇ ಹೆಚ್ಚಾಗಿ ವಾಸಿಸುವ ಈ ವಿಭಾಗಕ್ಕೆ ಆರೋಗ್ಯ ಕೇಂದ್ರವು ಅತ್ಯಾವಶ್ಯಕವಾಗಿರುವ ಕಾರಣ ಸರ್ಕಾರ ಈ ಬಗ್ಗೆ ಕೂಡಲೇ ಮಂಜೂರಾತಿ ನೀಡಬೇಕೆಂದು ಶಿಫಾರಸ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಏನು ಮಾಡುವುದೆಂದು ನಾನು ತಿಳಿಯಲಾಶಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-